ಮೆ : ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಬೀಳಗಿ ಇವರ ನ್ಯಾಯಾಲಯದಲ್ಲಿ

ಸಿ.ಸಿ.ನಂ.10/2023

CW-1 / PW-1

| | | |
|---|---|---|
| ಸಾಕ್ಷಿದಾರರ ಹೆಸರು | : | ಅಕ್ಷತಾ ಯರಾಸಿ |
| ಗಂಡನ ಹೆಸರು | : | ಮಲ್ಲಿಕಾರ್ಜುನ |
| ವಯಸ್ಸು | : | 28 |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಬನ್ನಿಕೊಪ್ಪ |

ದಿನಾಂಕ: **01-03-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ : ಎ.ಪಿ.ಪಿ. ಯವರಿಂದ.

ಚಾಸಾ-4 ನನ್ನ ಗಂಡ, ಚಾಸಾ-2, 3, 5 ರಿಂದ 10 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ನಾನು ಬನ್ನಿಕೊಪ್ಪದಲ್ಲಿ ವಾಸವಿರುತ್ತೇನೆ. ನನ್ನ ಮಗ ಚನ್ನುರವರನ್ನು ನೀಲಾಬಾಯಿ ಪಾಟೀಲ ರವರಿಗೆ ಹಿರಿಯರ ಸಮಕ್ಷಮ ದಿ 21.01.2021 ರಂದು ದತ್ತಕ ಕೊಟ್ಟಿರುತ್ತೇವೆ. ದಿ 22.01.2021 ರಂದು ಉಪನೊಂದಣಾಧಿಕಾರಿ ಕಛೇರಿಯಲ್ಲಿ ದತ್ತಕ ಪತ್ರ ನೊಂದಣಿ ಮಾಡಿಸಿರುತ್ತೇವೆ. ತುಮ್ಮರಮಟ್ಟಿಯಲ್ಲಿ ರಿ.ಸ. ನಂಬರ್ 54/4 ಕ್ಷೇತ್ರ 4 ಎಕರೆ 20 ಗುಂಟೆ ನೀಲಾಬಾಯಿ ಪಾಟೀಲ್ ರವರಿಗೆ ಸೇರಿದ್ದು ಇರುತ್ತದೆ. ಅದು ಮೊದಲು ಬಸನಗೌಡ ಪಾಟೀಲ ರವರ ಹೆಸರಿಗೆ ಇತ್ತು. ಅವರ ಹೆಂಡತಿ ಪರವಾಗಿ ಬಿಟ್ಟುಕೊಟ್ಟಿರುತ್ತಾರೆ. ಅವರಿಗೆ ಯಾವುದೇ ಸಂತಾನ ಇಲ್ಲದ ಕಾರಣ ನನ್ನ ಮಗನನ್ನು ದತ್ತಕ ತೆಗೆದುಕೊಂಡಿರುತ್ತಾರೆ. ನನ್ನ ಕಾಕ ಬಸನಗೌಡ ತೀರಿಕೊಂಡಿದ್ದರಿಂದ ಮನೆಗೆ ಕೀಲಿ ಹಾಕಬೇಕಿತ್ತು. ನೀಲಾಬಾಯಿ ಪಾಟೀಲ್ ನನ್ನ ಮಾವನ ತಂಗಿ ಅವರನ್ನು ನನ್ನ ಮನೆಗೆ ಕರೆದುಕೊಂಡು ಹೋಗಿದ್ದೆವು. ನೀಲಾಬಾಯಿ ಪಾಟೀಲ್ ರವರು ತಮ್ಮ ಜೀವಿತಾಕಾಲದಲ್ಲಿ ಜಮೀನನ್ನು ಚಾಸಾ-6 ರವರಿಗೆ ಸಾಗುವಳಿ ಮಾಡಲು ಕೊಟ್ಟಿದ್ದರು. ಅದರಲ್ಲಿ ಬಿಳಿ ಜೋಳ ಬಿತ್ತಿದ್ದರು. ಎರಡುವರೆ ತಿಂಗಳ ಬೆಳೆ ಇರುವಾಗ 1 ರಿಂದ 8 ನೇ ಆರೋಪಿತರು ಮತ್ತು ಶಂಕರಣ್ಣ ಪಾಟೀಲ್ ರವರು ಬಿಳಿ ಜೋಳವನ್ನು ಕಿತ್ತು ಹಾಕಿದರು. 3 ನೇ ಆರೋಪಿತ ಚಾಸಾ-6 ರವರಿಗೆ ಫೋನ್ ಮಾಡಿ ಬಿಳಿ ಜೋಳ ಕಿತ್ತು ಹಾಕುತ್ತೇವೆ ತಕರಾರು ಇದ್ದರೆ ಹೇಳಲಿ ಎಂದು ಹೇಳಿದರು. ಚಾಸಾ-6 ರವರು ಅಲ್ಲಿಗೆ ಹೋಗಿ ದತ್ತಕ ಮಗನ ಕಬ್ಜಾದಲ್ಲಿದೆ ಕೀಳಬೇಡಿ ಎಂದು ಹೇಳಿದರು. ನಮ್ಮ ಕಬ್ಜಾದಲ್ಲಿದೆ ಕಿತ್ತು ಹಾಕುತ್ತೇವೆ ಎಂದು ದಿ 23.11.2021 ರಂದು ಕಿತ್ತು ಹಾಕಿದರು. ಚಾಸಾ-6 ರವರು ನಮಗೆ ಫೋನ್ ಮಾಡಿ ವಿಷಯ ತಿಳಿಸಿದರು. ಚಾಸಾ-4 ಮತ್ತು ನಾನು ಅಲ್ಲಿಗೆ ಹೋಗಿ ನೋಡಿದೆವು. ಕಿತ್ತು ಹಾಕಬೇಡಿ ಎಂದು ಹೇಳಿದೆವು. ನಮ್ಮ ಕಬ್ಜಾದಲ್ಲಿದೆ ನೀವು ಏನು

ಮಾಡುತ್ತೀರಿ ಎಂದು ಬೆದರಿಕೆ ಹಾಕಿದರು. 1, 5 ನೇ ಆರೋಪಿತರು ನನ್ನನ್ನು ಗಟ್ಟಿಯಾಗಿ ಹಿಡಿದು 6, 8 ನೇ ಆರೋಪಿತರು ನನ್ನ ಕಪಾಳಕ್ಕೆ, ಬೆನ್ನಿಗೆ ಕೈಯಿಂದ ಹೊಡೆದರು. ನಿಮಗೆ ಏನು ಸಂಬಂಧ ಇಲ್ಲ ಎಂದು ಬರಕೆ ಹೋಗಬೇಡಿ ಎಂದು ಬೋಸೂಡಿ ಅಂತಾ ಅಸಹ್ಯವಾಗಿ ಬೈದರು. ನಮಗೆ ಹೊಡೆದರು. ಬೆಳೆ ಕಿತ್ತು ಹಾಕಿ 2 ಲಕ್ಷ ನಷ್ಟ ಉಂಟು ಮಾಡಿರುತ್ತಾರೆ. ಆ ಬಗ್ಗೆ ಪೋಲೀಸರಿಗೆ ದೂರು ಕೊಡಲು ಹೋಗಿದ್ದೆವು ಆ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಆ ಕಾರಣ ಎಸ್ ಪಿ ಆಫೀಸಿಗೆ ಹೋದೆವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು ಆದರೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ದಿ 09.12.2021 ರಂದು ನಾವು ವಕೀಲರ ಮೂಲಕ ನ್ಯಾಯಾಲಯಕ್ಕೆ ದೂರು ಸಲ್ಲಿಸಿರುತ್ತೇವೆ. ದೂರನ್ನು ನಿಪಿ-1 ಎಂದು, ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೋಲೀಸರು ಬಂದು ಪಂಚನಾಮೆ ಮಾಡಿರುತ್ತಾರೆ. ಮಹಜರ್ ಅನ್ನು ನಿಪಿ-2 ಎಂದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಪೋಟೋ ತೆಗೆದುಕೊಂಡಿರುತ್ತಾರೆ. ಬಿಳಿ ಜೋಳ ತೆಗೆದುಕೊಂಡು ಹೋಗಿರುತ್ತಾರೆ.

ಈ ಹಂತದಲ್ಲಿ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಅಂತೆಯೇ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ವ.ಕೇ.ಸರಿ ಅದೆ.
Sd/-
ಹಿರಿಯ ದಿವಾಣಿ ನ್ಯಾಯಾಧೀಶರು,ಬೀಳಗಿ.